# ನಾಗರೀಕತೆಗೆ ಬಲಿಪಶುವಾದ: ಹಾಡಿಹೈದನ ದುರಂತ ಅಂತ್ಯ

**ಅಚ್ಯುತ 'ಸಂಕೇತಿ'**
**9448086811**

ಅದೊಂದು ಚಲನಚಿತ್ರ ನೆನಪಾಗುತ್ತದೆ. ಸಾಂದರ್ಭಿಕ ಕಾರಣದಿಂದ ತಂದೆತಾಯಿಯರನ್ನು ಅಗಲಿ, ಸಾಕು ತಂದೆತಾಯಿಯರ ಆಶ್ರಯದಲ್ಲಿ ಕುರುಬರ ಹಟ್ಟಿಯಲ್ಲಿ ಬೆಳೆದ ಓರ್ವ ಯುವಕ, ಸ್ವಚ್ಛಂದವಾಗಿ ಹಳ್ಳಿಯಲ್ಲಿ ವಿಹರಿಸುತ್ತಾ, ಸರ್ವತಂತ್ರ ಬದುಕನ್ನು ಅಳವಡಿಸಿಕೊಂಡು, ತನ್ನದೇ ಲೋಕ ಸೃಷ್ಟಿಸಿಕೊಂಡಿದ್ದಾಗ, ಆತನ ನಿಜವಾದ ತಂದೆಯರು ಅವನನ್ನು ಕಂಡುಹಿಡಿದು ತಮ್ಮೊಡನೆ ನಗರ ಪ್ರದೇಶಕ್ಕೆ ಬಲವಂತವಾಗಿ ಕರೆದೊಯ್ದು ನಂತರ ಆಗುವ ಅನಾಹುತಗಳು, ಅವಾಂತರಗಳು, ಕೊನೆಗೆ ನಗರೀಕರಣದ ವಾತಾವರಣ ಅವನಿಗೆ ಹೊಂದಾಣಿಕೆಯಾಗದೆ, ಮತ್ತೆ ಹಳ್ಳಿಯನ್ನರಿಸಿ, ಅಲ್ಲೇ ಸುಖ ನೆಮ್ಮದಿ ಆತ ಕಂಡುಕೊಳ್ಳುವ ಕಥಾಹಂದರವುಳ್ಳ 'ಬಂಗಾರದ ಪಂಜರ' ಒಂದು ಅರ್ಥಪೂರ್ಣ ಚಿತ್ರಕಥಾನಕ. ಡಾ॥ ರಾಜ್‌ಕುಮಾರ್ ಅವರ ಅತ್ಯಮೋಘ ಅಭಿನಯ, ಎಲ್ಲರನ್ನೂ ಮಂತ್ರಮುಗ್ಧವಾಗಿಸಿದ್ದು ಒಂದು ನೆನಪು.

ಒಂದು ರೀತಿಯಲ್ಲಿ ಇದೇ ರೀತಿ ಸಾಗುವ, ಹೆಗ್ಗಡದೇವನಕೋಟೆಯ ಅರಣ್ಯದ ಆಸುಪಾಸಿನಲ್ಲೇ ಜೀವನ ಸಾಗಿಸುತ್ತಿದ್ದ ಬುಡಕಟ್ಟು ಸಮುದಾಯದ ಯುವಕ ರಾಜೇಶ, ಟಿವಿ ವಾಹಿನಿಯ ಮೂಲಕ ರಿಯಾಲಿಟಿ ಶೋನಲ್ಲಿ ಕಾಣಿಸಿಕೊಂಡ. 'ಹಳ್ಳಿ ಹೈದ, ಪ್ಯಾಟೇಗ್ ಬಂದ' ಕಾರ್ಯಕ್ರಮದಲ್ಲಿ ಮೊದಲಿಗೆ ಪರಿಚಿತನಾದ. ನಗರ ಜೀವನವೇ ಹೊಸದು, ಅದರಲ್ಲೂ ಜನಪ್ರಿಯ ಪ್ರಭಾವಿ ಮಾಧ್ಯಮವಾದ ಟಿವಿಯಲ್ಲಿ ಕಾಣಿಸಿಕೊಂಡು ದಿಢೀರನೇ ಜನಪ್ರಿಯನಾದಾಗ ಅವನಿಗೆ ಇದನ್ನು ಅರಗಿಸಿಕೊಳ್ಳಲಾಗಲಿಲ್ಲ. ಜನಪ್ರಿಯತೆಯ ಕಾರಣ, ರಾತ್ರೋರಾತ್ರಿ ಸೆಲೆಬ್ರಿಟಿಯಾಗಿಬಿಟ್ಟಿದ್ದ. ತನ್ನ ಮುಗ್ಧತೆಯ ಪ್ರತಿಕ್ರಿಯೆ, ಎಲ್ಲವನ್ನೂ ನೇರವಾಗಿ ಇದ್ದುದನ್ನು ಇದ್ದುದನ್ನೇ ಹೇಳಿಬಿಡುವ ಅಮಾಯಕತೆ ಒಂದು ರೀತಿಯಲ್ಲಿ ಅವನಿಗೇ ಮುಳುವಾಯಿತೇನೋ?

ಕಿರುತೆರೆಯ ಜನಪ್ರಿಯತೆ ಆತನನ್ನು ಬೆಳ್ಳಿತೆರೆಗೂ ಎಳೆದುತಂದಿತು. ಅವನು ನಟಿಸಿದ 'ಲವ್ ಈಸ್ ಪಾಯ್ಸನ್' ಬಿಡುಗಡೆ ಆಯಿತಲ್ಲದೇ, ಇನ್ನೂ ಅನೇಕ ಚಿತ್ರಗಳಲ್ಲಿ ನಟಿಸುವಂತೆ ಆತನಿಗೆ ಅವಕಾಶಗಳುಅರಸಿಬಂದವು. ಈ ಮಧ್ಯೆ ಬಿಗ್‌ಬಾಸ್‌ನಲ್ಲಿ ಅತಿಥಿ ಗಣ್ಯನಾಗಿ ಪ್ರವೇಶ ಪಡೆದು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದ.

ಕಡುಬಡತನದಲ್ಲೇ ಬದುಕಿ, ಕಷ್ಟದ ಜೀವನವನ್ನು ಸಾಗಿಸುತ್ತಿದ್ದ ರಾಜೇಶ್, ಏಕಾಏಕಿ ಹೆಸರು ಮಾಡಿದ, ಹಣ ಗಳಿಸಿದ, ವಾಹನ ಖರೀದಿಸಿದ. ಮನೆಯನ್ನು ಅಲಂಕರಣಗೊಳಿಸಿದ. ಕಾಡಿನ ಪರಿಸರದಲ್ಲೇ ಹುಟ್ಟಿ ಬೆಳೆದು ದೊಡ್ಡವನಾಗಿದ್ದ ರಾಜೇಶ್, ನಿಧಾನವಾಗಿ ಆ ಅಚ್ಚ ಹಸಿರ ನೈಸರ್ಗಿಕ ಪರಿಸರದಿಂದ ದೂರಸಾಗಿಬಿಟ್ಟಿದ್ದ. ನಗರ ಜೀವನದ ಸೆಳೆತಕ್ಕೆ ಸಹಜವಾಗಿ ಆಕರ್ಷಿತನಾಗಿದ್ದ.

ಇದೆಲ್ಲದರ ಜೊತೆಗೆ, ಬಡತನದ ಸ್ಥಿತಿಯಿಂದ ತ್ವರಿತವಾಗಿ ಸಿರಿವಂತಿಕೆಯ ಹಾದಿಯ ಸ್ಥಿತ್ಯಂತರ ವಾಸ್ತವವಾಗಿ ಅವನಿಗೆ ಅರಗಿಸಿಕೊಳ್ಳಲು ಆಗಿರಲಿಲ್ಲ. ಇನ್ನೂ ಸಮಯ ಬೇಕಾಗಿತ್ತು. ಹೀಗಾಗಿ ಮಾನಸಿಕವಾಗಿ ಜರ್ಝರಿತನಾಗಿದ್ದ. ಜೀವನದಲ್ಲಿ ಸಮತೋಲನ ಕಾಯ್ದುಕೊಳ್ಳದೆ ತಳಮಳಿಸಿದ. ಆಸ್ಪತ್ರೆಯನ್ನೂ ಸೇರಿ ಚಿಕಿತ್ಸೆ ಪಡೆದು, ಆರೋಗ್ಯಪೂರ್ಣನಾಗಿ ಹೊರಬಂದಿದ್ದರೂ, ರಾಜೇಶ ಸಂಪೂರ್ಣ ಗುಣಮುಖನಾಗಿರಲಿಲ್ಲ. ತೀರಾ ಅಂತರ್ಮುಖಿಯಾಗಿದ್ದ; ಹಲವಾರು ಗೊಂದಲಗಳು, ಮೃಗೀಯ ಪ್ರವೃತ್ತಿಗಳು ಅವನನ್ನು ಕಾಡುತ್ತಿದ್ದವು. ಅತನ ವೈವಾಹಿಕ ಬದುಕೂ ಏರುಪೇರಿನಿಂದ ಕೂಡಿ, ಪರಿಸ್ಥಿತಿಯನ್ನು ದುರ್ಭರಗೊಳಿಸಿದ್ದೂ ಉಂಟು.

nagarikaranakke balipashuvada jungle jacky

ಕೆಲವೊಂದು ನಂಬಿಕೆಗಳಿಂದ, ಆತನ ಪೋಷಕರು ದೇವರಿಗೆ ಹರಕೆ ಕಟ್ಟಿದರು. ಅಮಾವಾಸ್ಯೆಯ ಪರಿಣಾಮ ಇದು ಎಂದು ಭಾವಿಸಿದ್ದರು. ಮೈಸೂರಿಗೆ ತೆರಳಿ, ಚಾಮುಂಡಿ ಬೆಟ್ಟದ ಮೇಲೆ ವಿರಾಜಮಾನಳಾಗಿರುವ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದು, ರಾಜೇಶನ ಒಳಿತಿಗೆ ಪ್ರಾರ್ಥಿಸಿ ಪೂಜೆ ಸಲ್ಲಿಸಿದ್ದರು. ಪೂಜೆ ಪೂರೈಸಿ ಕಾರಿನಲ್ಲಿ ಸ್ವಗ್ರಾಮಕ್ಕೆ ಮರಳಿದರು. ಅಲ್ಲಿಂದ ಬರುವಾಗಲೂ ಸ್ವಲ್ಪ ವಿಭಿನ್ನವಾಗಿ ವರ್ತಿಸುತ್ತಿದ್ದ ರಾಜೇಶ್, ಇನ್ನೂ ತೊಳಲಾಟಮುಕ್ತನಾಗಿರಲಿಲ್ಲ ಎಂಬುದಂತೂ ಸುಸ್ಪಷ್ಟ. ಒಂದು ಬಗೆಯ ಖಿನ್ನತೆಯ ಮನೋಸ್ಥಿತಿಯನ್ನು ರಾಜೇಶ್ ಅನುಭವಿಸುತ್ತಿದ್ದ ಎನಿಸುತ್ತದೆ.

ಈ ಮನಸ್ಥಿತಿಯಲ್ಲಿ ಮೈಸೂರಿನ ಶ್ರೀರಾಮಪುರದ ಪರಸಯ್ಯನಗುಂಡಿಯಲ್ಲಿರುವ ತನ್ನ ಮನೆಯ 3ನೇ ಮಹಡಿಯಲ್ಲಿ ನಿಂತಿದ್ದ ರಾಜೇಶ, ಅನ್ಯಮನಸ್ಕನಾಗಿದ್ದುದರ ಪರಿಣಾಮ ಆಯತಪ್ಪಿ ಮೇಲಿನಿಂದ ಕೆಳಕ್ಕೆ ಬಿದ್ದು ತನ್ನ ಪ್ರಾಣಕ್ಕೇ ಸಂಚಕಾರ ತಂದುಕೊಂಡದ್ದಂತೂ ನಿಜಕ್ಕೂ ದುರಂತವೇ ಸರಿ. ಮನೆಯ ಮುಂದಿನ ಕಬ್ಬಿಣದ ಸರಳುಗಳ ಮೇಲೆ ಬಿದ್ದ ಪರಿಣಾಮ, ಹೊಟ್ಟೆಯನ್ನು ಚೂಪಾದ ಕಬ್ಬಿಣದ ಸರಳುಗಳು ತೂರಿಹೋಗಿವೆ. ಒಂದು ಕಬ್ಬಿಣದ ಸರಳಂತೂ ಬಿದ್ದ ಭಾರಕ್ಕೆ ಬಾಗಿರುವುದು ವಿದ್ಯಮಾನದ ಪರಿಣಾಮ ಎಷ್ಟಿತ್ತೆಂಬುದನ್ನು ಸಾಬೀತು ಮಾಡುತ್ತದೆ. ಆ ಸಂದರ್ಭದಲ್ಲಿ ತಾಯಿಯೊಂದಿಗೆ ಜೋರಾಗಿ ಜಗಳವಾಡುತ್ತಾ ಇರುವಾಗ ಹಿಮ್ಮುಖವಾಗಿ ನೆಲಕ್ಕೆ ಬಿದ್ದು ಈ ಘಟನೆ ಸಂಭವಿಸಿತು ಎಂದು ಸ್ಥಳೀಯ ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ.

ಕಪಟವರಿಯದ ಮುಗ್ಧತೆಯ ಪ್ರತಿರೂಪವಾಗಿದ್ದ ರಾಜೇಶ್, ಕಾಡಿನ ಸಹಜ ಪರಿಸರದಿಂದ, ನಗರ ಪರಿಸರಕ್ಕೆ ಹೊಂದಿಕೊಳ್ಳಲಾಗದೆ, ಆದರೆ ಹಣದ ಹೊಳೆ ಹರಿದುದರ ಪರಿಣಾಮ, ಅದನ್ನೂ ನಿರಾಕರಿಸಲಾಗದೆ ದ್ವಂದ್ವ ಮನೋಸ್ಥಿತಿಯಲ್ಲಿ ಯಾರಿಗೂ ತನ್ನ ಒಳಗುದಿಯನ್ನು ಪ್ರಕಟಪಡಿಸದೆ, ನಲುಗಿದುದರ ಪರಿಣಾಮವೇ ಆತ ತನ್ನ ಮಾನಸಿಕ ಸ್ಥಿರತೆಯನ್ನು ಕಳೆದುಕೊಂಡಿದ್ದು, ಅದರ ಅಡ್ಡಪರಿಣಾಮವಾಗಿ ತನ್ನ ಪ್ರಾಣವನ್ನೇ ಪಣವಾಗಿಟ್ಟಿದ್ದಂತೂ ಯಾರೂ ಮರೆಯಲಾಗದ ಘನಘೋರ ದುರಂತ. ಒಂದು ಗ್ರಾಮೀಣ ಪ್ರತಿಭೆ, ಮೋಗ್ಲಿ ರೀತಿಯ ಓರ್ವ ಕಾಡಿನ ಹುಡುಗ ಹೇಗೆ ನಗರೀಕರಣದ ಪರಿಣಾಮ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾನೆ, ಕಾಡಿನಿಂದ ನಾಡಿಗೆ ಬಂದು, ತನ್ನ ಈ ರೀತಿ ಜೀವನವನ್ನು ಅಂತ್ಯಮಾಡಿಕೊಳ್ಳುತ್ತಾನೆ ಎಂಬುದಕ್ಕೆ ರಾಜೇಶ್‌ನ ದುರಂತ ಅಂತ್ಯ ಒಂದು ಜ್ವಲಂತ ನಿದರ್ಶನ.

ರಾಜೇಶ್ ಸಾವಿನಿಂದ ಎಲ್ಲರೂ ನಮ್ಮನ್ನು ನಾವು ಪ್ರಶ್ನಿಸುಕೊಳ್ಳುವಂತಾಗಬೇಕು. ನಾವು ಸಾಗುತ್ತಿರುವ ಹಾದಿ ಸರಿಯಾಗಿದೆಯೇ? ಹಿಂದೆ–ಮುಂದೆ ಯೋಚಿಸದೆ, ಕೇವಲ ಬಾಹ್ಯಾಡಂಬರದಲ್ಲಿ ಮುಳುಗಿಹೋಗಿರುವ ನಾವು ಅದನ್ನೇ ಶಾಶ್ವತ ಎಂದು ಭ್ರಮಿಸುತ್ತಿದ್ದೇವೆ. ಕೇವಲ ಹಣ ಗಳಿಕೆಯೇ ಪರಮೋಚ್ಚ ಧ್ಯೇಯ ಎಂಬ ಹುಸಿ ನಂಬಿಕೆಯನ್ನು ರೂಢಿಸಿಕೊಂಡಿದ್ದೇವೆ. ಇದರ ಪರಿಣಾಮ ಕೊಳ್ಳುಬಾಕ ಸಂಸ್ಕೃತಿಯನ್ನು ನಾವು ಬಾಚಿ ತಬ್ಬಿದ್ದೇವೆ. ಮೌಲ್ಯ, ಸಂಸ್ಕೃತಿ, ಸದಭಿರುಚಿಗಳನ್ನು ಮೂಲೆಗೊತ್ತಿದ್ದೇವೆ. ಇನ್ನಾದರೂ ನಮ್ಮ ಒಳಗಣ್ಣನ್ನು ನಾವು ತೆರೆದು ವಾಸ್ತವತೆಯನ್ನು ಅರ್ಥಮಾಡಿಕೊಂಡು ಉತ್ತಮ, ಸರಳ ಜೀವನ ನಡೆಸುವತ್ತ, ಆದರ್ಶದ ಬದುಕು ಅನುಸರಿಸುವತ್ತ ಎಲ್ಲರೂ ಚಿತ್ತ ಹರಿಸಬೇಕಿದೆ.